	ಅನರ್ಹತೆ ನಡವಳಿಗಳು ಸಂಪೂರ್ಣವಾಗಿದೆಯೇ?	ವಸೂಲಾತಿಗಾಗಿ ಕ್ರಮ ಜರುಗಿಸಿದೆ ಪ್ರಕರಣ ಸಂ ೦೪ ೨೦೦೧-೦೨ ೯೮ ೨೦೦೦-೦೧ ಮತ್ತು ೯೬ ೨೦೦೦-೦೧ ಪ್ರತಿವಾದಿಗಳಿಂದ ಕರ್ನಾಟಕ ಮೇಲ್ವಿಚಾರಣಾ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ ಅದು ಇತ್ಯರ್ಥಕ್ಕಾಗಿ ಬಾಕಿ ಇದೆ
ಇ)	ವಸೂಲಾತಿ ಹಾಗೂ ಅನರ್ಹತೆ ನಡವಳಿಕೆಗಳು ಯಾರ ವಿಷಯದಲ್ಲಿ ಬಾಕಿ ಉಳಿದಿದೆ? ಹಾಗೂ ಇದಕ್ಕೆ ಕಾರಣಗಳೇನು?	ವಸೂಲಾತಿ ನಡವಳಿಕೆಗಳು ಮುಕ್ತಾಯವಾಗಿದ್ದು ಬಾಕಿ ಇರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೩೮ (೨೧೫೬)

ಸದಸ್ಯರ ಹೆಸರು ಶ್ರೀ ಕೃಷ್ಣ ಸಾಲೇಮಾರ್ ಜೆ (ಸುರತ್ಕಲ್)

ಉತ್ತರಿಸುವ ಸಚಿವರು ಶ್ರೀ ಜೆ ಟಿ ದೇವೇಗೌಡ (ಸಹಕಾರ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ನೇಕಾರರಿಗೆ ಶೇಕಡಾ ೪ ರ ಬಡ್ಡಿದರದ ಸಾಲ ನೀಡಿಕೆಗೆ ಸರ್ಕಾರಿ ಕೈಗೊಂಡ ಕ್ರಮಗಳೇನು?	ಸರ್ಕಾರದ ಆದೇಶ ಸಂಖ್ಯೆ ಸಿಒ/೪೪/ಸಿಎಲ್ ಎಸ್/೨೦೦೬ ದಿನಾಂಕ ೧೭.೦೬.೨೦೦೬ ರಂತೆ ರಾಜ್ಯದ ಸಹಕಾರಿ ಸಂಸ್ಥೆಗಳು ಮತ್ತು ಪಟ್ಟಣ ಸಹಕಾರಿ ಬ್ಯಾಂಕುಗಳು

		ನೇಕಾರರಿಗೆ ನೇಕಾರಿಗೆ ಉದ್ದೇಶಗಳಿಗಾಗಿ ಶೇ ೪ರ ಬಡ್ಡಿ ದರದಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಒದಗಿಸಲು ಆದೇಶ ಹೊರಡಿಸಲಾಗಿರುತ್ತದೆ ೨೦೦೬-೦೭ ನೇ ಸಾಲಿನ ಆಯವ್ಯಯದಲ್ಲಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಸದರಿ ಯೋಜನೆಗೆ ರೂ ೩೦೦ ೦೦ ಲಕ್ಷಗಳನ್ನು ಒದಗಿಸಲಾಗಿದ್ದು, ಸದರಿ ಮೊತ್ತವನ್ನು ಯೋಜನೆಯ ಅನುಷ್ಠಾನಕ್ಕಾಗಿ ದಿನಾಂಕ ೧೬.೦೩.೨೦೦೭ ರಂದು ಸಹಕಾಖ ಸಂಘಗಳ ನಿಬಂಧಕರು ಬೆಂಗಳೂರು ಇವರಿಗೆ ಬಿಡುಗಡೆ ಮಾಡಲಾಗಿದೆ
ಆ	ಈ ಯೋಜನೆಯ ಅನುಷ್ಠಾನಕ್ಕೆ ಬೇಕಾಗಬಹುದಾದ ಅಂದಾಜು ಮೊತ್ತ ಎಷ್ಟು?	೨೦೦೬-೦೭ನೇ ಸಾಲಿನಲ್ಲಿ ಸದರಿ ಯೋಜನೆಗೆ ರೂ ೩೦೦ ೦೦ ಲಕ್ಷಗಳ ಬಡ್ಡಿ ಸಹಾಯಧನದ ಅವಶ್ಯಕತೆಯದೆಯೆಂದು ಅಂದಾಜಿಸಲಾಗಿದ್ದು, ಸದರಿ ಮೊತ್ತವನ್ನು ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಒದಗಿಸಲಾಗಿದೆ
ಇ)	ಇದುವರೆವಿಗೆ ಎಷ್ಟು ಫಲಾನುಭವಿಗಳಿಗೆ ಸಾಲ	ಸದರಿ ಯೋಜನೆಯಡಿ ಈವರೆಗೂ ರಾಜ್ಯದ ೩೦೫ ನೇಕಾರರಿಗೆ ಒಟ್ಟು

	ಸೌಲಭ್ಯವನ್ನು ನೀಡಲಾಗಿದೆ?	ರೂ ೩೯೨೨೫ ಲಕ್ಷಗಳ ಸಾಲ ಸೌಲಭ್ಯವನ್ನು ನೀಡಲಾಗಿದೆ
ಈ)	ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ನೀಡುವಲ್ಲಿ ಇದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ಕ್ರಮವೇನು?	ಪಟ್ಟಣ ಸಹಕಾರ ಬ್ಯಾಂಕುಗಳ ನಿಧಿಗಳ ಬೆಲೆಯು ಜಾಸ್ತಿ ಇದ್ದು ಸರ್ಕಾರವು ಒದಗಿಸುವ ಸಹಾಯಧನದ ಪ್ರಮಾಣವನ್ನು ಹೆಚ್ಚಿಸಲಬೇಕೆಂದೂ ಮತ್ತು ಸಹಾಯಧನವನ್ನು ಕನಿಷ್ಠಪಕ್ಷ ೩ ತಿಂಗಳಿಗೊಂಮೆಯಾದರೂ ಮುಂಗಡವಾಗಿ ಬಿಡುಗಡೆ ಮಾಡಬೇಕೆಂದೂ ವೇಡಿಕೆಯಿಂದ ಈ ಬಗ್ಗೆ ಸಕಾರವು ಪರಿಶೀಲಿಸುತ್ತಿದೆ
ಉ)	ರೈತರಿಗೆ ಶೇಕಡಾ ೪ ರಂತೆ ಸಾಲಕ್ಕೆ ಪ್ರತ್ಯೇಕ ಖಾತೆಯಲ್ಲಿ ಹಣ ಮೀಸಲಿಟ್ಟ ರೀತಿಯಲ್ಲಿ ನೇಕಾರರ ಸಾಲಕ್ಕೆ ಸಕಾರ ಪ್ರತ್ಯೇಕ ಹಣ ಮೀಸಲಿಡಲು ಕ್ರಮ ಜರುಗಿಸುವುದೇ?	೨೦೦೬–೦೭ನೇ ಸಾಲಿನ ಆಯವ್ಯಯದಲ್ಲಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಸದರಿ ಯೋಜನೆಗೆ ರೂ ೩೦೦ ೦೦ ಲಕ್ಷಗಳನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ